# Karnataka woos aerospace firms for MRO in Bengaluru

| Pub Date: | 02 Dec 2015 | Publication: | Udayavani | Edition: | Bangalore |
| --- | --- | --- | --- | --- | --- |
| Journalist: | Bureau | Language: | Kannada | Page No.: | 7 |
| CCM: | 65.91 | MAV: | 59318.46 | Circulation | 30084 |



'ಉನ್ನತ' ಯೋಜನೆ ■ ವಿಮಾನಯಾನಕ್ಕೆಂದೇ 1000 ಎಕರೆ ವಿಶೇಷ ಆರ್ಥಿಕ ವಲಯ ■ 'ಇಂಡಿಯಾ ಎಂಆರ್‌ಒ-2015' ಉದ್ಘಾಟನೆ

## ರಾಜ್ಯ ಸರ್ಕಾರದಿಂದ ಏರೋಸ್ಪೇಸ್ ವಿವಿ ಸ್ಥಾಪನೆ: ಬೇಗ್

**ಬೆಂಗಳೂರು:** ರಾಜ್ಯದಲ್ಲಿ ವೈಮಾಂತರಿಕ್ಷ ಕ್ಷೇತ್ರದ ಉತ್ತೇಜನಕ್ಕೆ ಏರೋಸ್ಪೇಸ್ ನೀತಿ ಜಾರಿಗೆ ತಂದಿರುವ ಸರ್ಕಾರ, ಈ ಕ್ಷೇತ್ರದ ಬೆಳವಣಿಗೆಗೆ ವಿಶೇಷ ಆರ್ಥಿಕ ವಲಯ ಹಾಗೂ ಪ್ರತ್ಯೇಕ ಏರೋಸ್ಪೇಸ್ ವಿಶ್ವವಿದ್ಯಾಲಯ ಸ್ಥಾಪಿಸುತ್ತಿದೆ ಎಂದು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಆರ್. ರೋಷನ್ ಬೇಗ್ ತಿಳಿಸಿದ್ದಾರೆ.

ಎಂಆರ್‌ಒ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯು ಎಂಎಂ ಆಕ್ಟಿವ್ ಹಾಗೂ ಕೆನಿಯಸ್ ಇಂಟರ್‌ನ್ಯಾಷನಲ್ ಸಭಾಗಿತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ ದೇಶದ ವೈಮಾಂತರಿಕ್ಷ ಮತ್ತು ರಕ್ಷಣಾ ಕ್ಷೇತ್ರದ ನಿರ್ವಹಣೆ, ದುರಸ್ತಿ ಹಾಗೂ ಕಾರ್ಯಾಚರಣೆ (ಎಂಆರ್‌ಒ) ಉದ್ದಿಮೆಗಳ ಪ್ರದರ್ಶನ 'ಇಂಡಿಯಾ ಎಂಆರ್‌ಒ-2015' ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ದೇಶದ ವೈಮಾಂತರಿಕ್ಷ ಕ್ಷೇತ್ರದ ರಾಜಧಾನಿ ಎನಿಸಿಕೊಂಡಿದೆ. ಎಚ್‌ಎಎಲ್ ಸೇರಿದಂತೆ ವೈಮಾಂತರಿಕ್ಷ ಕ್ಷೇತ್ರಕ್ಕೆ ಸಂಬಂಧಿಸಿದ ಬಿಇಎಲ್," ಇಸ್ರೋ ಮುಂತಾದ ಬಲಾಢ್ಯ ಸಂಸ್ಥೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕ್ಷೇತ್ರದ ಬೆಂಗಳೂರಿನ ಈ ಹೆಗ್ಗಳಿಕೆಯನ್ನು ಉತ್ತೇಜಿಸಿ ಜಾಗತಿಕ ಮಟ್ಟದ ವೈಮಾಂತರಿಕ್ಷ ಉದ್ಯಮವನ್ನು ಇಲ್ಲಿಗೆ ಮತ್ತಷ್ಟು ಸೆಳೆಯಲು ರಾಜ್ಯ ಸರ್ಕಾರ ಅನೇಕ ಹೆಜ್ಜೆಗಳನ್ನು ಇಟ್ಟಿದೆ. ಅದರ ಭಾಗವಾಗಿ ದೇಶದಲ್ಲಿ ಮೊದಲ ಬಾರಿಗೆ ಏರೋಸ್ಪೇಸ್ ನೀತಿ ಜಾರಿಗೆ ತರಲಾಗಿದೆ. ಅಲ್ಲದೇ, ದೇವನಹಳ್ಳಿ ಬಳಿ ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ 1 ಸಾವಿರ ಎಕರೆ ಜಮೀನು ಮೀಸಲಿಡಲಾಗಿದೆ. ಈ ಕ್ಷೇತ್ರದ ಸಂಶೋಧನೆ ವಿಸ್ತರಿಸಲು ಏರೋಸ್ಪೇಸ್ ವಿವಿ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಬೇಗ್ ತಿಳಿಸಿದರು.


ಬೆಂಗಳೂರಿನಲ್ಲಿ ನಡೆದ 'ಇಂಡಿಯಾ ಎಂಆರ್‌ಒ' ಪ್ರದರ್ಶನದಲ್ಲಿ ರೋಷನ್ ಬೇಗ್

ಕರ್ನಾಟಕದಲ್ಲಿ ವೈಮಾಂತರಿಕ್ಷ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲಕರ ವಾತಾವರಣ ನಿರ್ಮಾಣ ಮಾಡಿಕೊಡುವುದರ ಜೊತೆಗೆ ಅಗತ್ಯ ಮೌಲಸೌಕರ್ಯ ಒದಗಿಸಲು ಸರ್ಕಾರ ಸಾಕಷ್ಟು ಒತ್ತು ನೀಡುತ್ತಿದೆ. ಕೈಗಾರಿಕೆಗಳ ಸ್ಥಾಪನೆಗೆ ಕಾನೂನಾತ್ಮಕ ಮತ್ತು ತಾಂತ್ರಿಕ ಅಡಚಣೆಗಳನ್ನು ದೂರ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತಾವನೆಗಳ ತ್ವರಿತ ವಿಲೇವಾರಿ ಮಾಡಲು ಏಕಗವಾಕ್ಷಿ ಪದ್ಧತಿ ಜಾರಿಗೆ ತರಲಾಗಿದೆ. ಅಲ್ಲದೇ 50 ಕೋಟಿ ರೂ. ಮೇಲ್ಪಟ್ಟ ಹಣ ಹೂಡಿಕೆಯ ಯೋಜನೆಗಳ ಪ್ರಸ್ತಾವನೆಗಳನ್ನು ಮುಖ್ಯಮಂತ್ರಿ ನೇತೃತ್ವದ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅನುಮೋದನೆ ನೀಡುತ್ತದೆ. ಕರ್ನಾಟಕದಲ್ಲಿನ ನೈಸರ್ಗಿಕ ಮತ್ತು ರಾಜ್ಯ ಸರ್ಕಾರದ ಅನುಕೂಲತೆಗಳನ್ನು ಬಳಸಿಕೊಂಡು ವೈಮಾಂತರಿಕ್ಷ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಮುಂದೆ ಬರುವಂತೆ ಕೈಗಾರಿಕೋದ್ಯಮಿಗಳಿಗೆ ರೋಷನ್‌ಬೇಗ್ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಂದಿತಾ ಶರ್ಮಾ, ಎಚ್.ಎ.ಎಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾವೇರಿ ರಂಗನಾಥನ್, ಮ್ಯಾಕ್ಸ್ ಎಂಆರ್‌ಒ ಸರ್ವೀ... ಅಧ್ಯಕ್ಷ ಭರತ್ ಮಲ್ಕಾನಿ, ಕೆನಿಯೆಸ್ ಅಧ್ಯ... ಡಾ. ಮಿಲಿಂದ್ ಪಿಂಪ್ರಿಕರ್, ಎಂಎಂ ಆ್ಯಕ್ಟಿವ್ ಕಮ್ಯೂನಿಕೇಷನ್ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಪಾಟನಾಕರ್, ಎಂಆರ್‌ಒ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಪುಲಕ್ ಸೇ... ಮತ್ತಿತರರು ಇದ್ದರು.